Bruhat Bengaluru
Mahanagara Palike

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಕನ್ನಡ ದಿನಪತ್ರಿಕೆಗಳ ತುಣಕು

## 17-12-2020



Edit with WPS Office

# ಪರಿವಿಡಿ

1. ಪ್ರಜಾ ವಾಣಿ
2. ಕನ್ನಡ ಪ್ರಭ
3. ವಿಜಯ ಕರ್ನಾಟಕ
4. ವಿಜಯ ವಾಣಿ
5. ವಿಶ್ವ ವಾಣಿ
6. ಉದಯ ವಾಣಿ
7. ಸಂಯುಕ್ತ ಕರ್ನಾಟಕ
8. ಹೊಸ ದಿಗಂತ
9. ವಾರ್ತಾ ಭಾರತಿ
10. ಸಂಜೆ ವಾಣಿ
11. ಈ ಸಂಜೆ

Edit with WPS Office

ಪ್ರಜಾವಾಣಿ

# ಒಎಫ್‌ಸಿ ಕಡಿತ: ಗುತ್ತಿಗೆದಾರರ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗುತ್ತಿಗೆ ಮುಂದುವರಿಸದ ಕಾರಣಕ್ಕೆ ಗ್ರಾಹಕರಿಗೆ ಟೆಲಿಕಾಂ ಸೇವೆ ಒದಗಿಸುವ ಒಎಫ್‌ಸಿ ಕೇಬಲ್‌ಗಳನ್ನು ಕತ್ತರಿಸಿ, ಸೇವೆಯಲ್ಲಿ ವ್ಯತ್ಯಯ ಆಗುವಂತೆ ಮಾಡಿದ್ದಾರೆ ಎಂದು ಆರೋಪಿಸಿ ಇಬ್ಬರು ಗುತ್ತಿಗೆದಾರರ ವಿರುದ್ಧ ವೊಡಾಫೋನ್ ಇಂಡಿಯಾ ಲಿಮಿಟೆಡ್ (ವಿಐಎಲ್) ಪೊಲೀಸರಿಗೆ ದೂರು ನೀಡಿದೆ.

ಈ ಸಂಬಂಧ ಬಾಲಕೃಷ್ಣ ಹಾಗೂ ಮನು ಎಂಬುವರ ವಿರುದ್ಧ ಸಂಪಿಗೆಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಕೇಬಲ್ ನಿರ್ವಹಣೆಯ ಗುತ್ತಿಗೆ ಮುಂದುವರಿಸದ ಕಾರಣ, ನಾಗವಾರ, ಥಣಿಸಂದ್ರ, ಟೆಲಿಕಾಂ ಬಡಾವಣೆಗಳಲ್ಲಿ ಉದ್ದೇಶಪೂರ್ವಕವಾಗಿ ಕೇಬಲ್‌ಗಳನ್ನು ಕಡಿತಗೊಳಿಸಿ, ಗ್ರಾಹಕರ ಸೇವೆಗೆ ತೊಂದರೆ ಮಾಡಿದ್ದಾರೆ. ಗ್ರಾಹಕರಿಗೆ ಸಂಸ್ಥೆಯ ಮೇಲಿರುವ ವಿಶ್ವಾಸಕ್ಕೆ ಧಕ್ಕೆ ಉಂಟು ಮಾಡಿದ್ದಾರೆ. ಸಂಸ್ಥೆಗೂ ನಷ್ಟ ಆಗುವಂತೆ ಮಾಡಿದ್ದಾರೆ' ಎಂದು ದೂರಿನಲ್ಲಿ ತಿಳಿಸಿದೆ.

'ಸಂಸ್ಥೆಯ ತಾಂತ್ರಿಕ ಎಂಜಿನಿಯರ್‌ಗಳು ಕೇಬಲ್ ಸರಿಪಡಿಸುತ್ತಿದ್ದಾಗ ಸ್ಥಳಕ್ಕೆ ಬಂದು ನಾವೇ ಕೇಬಲ್ ಕಡಿತಗೊಳಿಸಿದ್ದು ಎಂದು ಹೇಳಿದ್ದಾರೆ. ಗ್ರಾಹಕರ ಸೇವೆಗೆ ವ್ಯತ್ಯಯ ಉಂಟು ಮಾಡಿದ ಇವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು' ಎಂದು ಮನವಿ ಮಾಡಿದೆ.

'ನಮ್ಮ ಗ್ರಾಹಕರಿಗೆ ಗರಿಷ್ಠ ವೇಗದ ಜಾಲದ ಮೂಲಕ ಅತ್ಯುತ್ತಮ ದರ್ಜೆಯ ಗಿಗಾನೆಟ್ ಸೇವೆ ಒದಗಿಸಲು ನಾವು ಬದ್ಧರಾಗಿದ್ದೇವೆ. ಕೆಲವರ ದುಷ್ಕೃತ್ಯಗಳಿಂದ ಗ್ರಾಹಕರಿಗೆ ಆಗುತ್ತಿರುವ ತೊಂದರೆಗೆ ನಾವು ವಿಷಾದಿಸುತ್ತೇವೆ' ಎಂದು ವೊಡಾಫೋನ್ ಇಂಡಿಯಾ ಲಿಮಿಟೆಡ್ (ವಿಐಎಲ್) ಪ್ರಕಟಣೆ ತಿಳಿಸಿದೆ.

-ಆಪರೇಟಿವ್ ಬ್ಯಾಂಕ್ ಲಿ.,
...ಳೂರು-560003 Email: mcb_mal@yahoo.com
... ಮಹಾಸಭೆಯ ಸೂಚನಾ ಪತ್ರ

ವಾಣಿಜ್ಯ ತೆರಿಗೆಗಳ ಇಲಾಖೆ
ವಾಣಿಜ್ಯ ತೆರಿಗೆ ಅಪರ ಆಯುಕ್ತರವರ ಕಛೇರಿ,(ಜಾರಿ)-ದಕ್ಷಿಣ ವಲಯ,
ವಾಣಿಜ್ಯ ತೆರಿಗೆ ಕಾರ್ಯಾಲಯ-2, ಬಿ ಬ್ಲಾಕ್, ಕೋರಮಂಗಲ, ಬೆಂಗಳೂರು-560047
ಸಂಖ್ಯೆ: ವಾತೆಅಆ/ಜಾರಿ/ದವ/ದೇ.ಶಾ/ಸಿಆರ್-05/2019-20 ದಿನಾಂಕ: 11-12-2020

Edit with WPS Office

ಪ್ರಜಾವಾಣಿ



# ಬೀದಿ ನಾಟಕ

ವಿಶ್ವ ಭಾರತಿ ಕ್ರೀಡಾ ಮತ್ತು ಸಾಂಸ್ಕೃತಿಕ ತಂಡ ಹಾಗೂ ಶೂನ್ಯ ತಂಡದವರು ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾರ್ಯಕ್ರಮದ ಅಂಗವಾಗಿ 'ತಂಬಾಕು ಬಿಟ್ಹಾಕು, ತಂಬಾಕು ಸುಟ್ಹಾಕು' ಎಂಬ ಬೀದಿ ನಾಟಕವನ್ನು ಟೌನ್‌ಹಾಲ್ ಎದುರು ಬುಧವಾರ ಪ್ರದರ್ಶಿಸಿದರು

ಪ್ರಜಾವಾಣಿ ಚಿತ್ರ: ಅನೂಪ್ ರಾಘ್. ಟಿ.

Edit with WPS Office

ಕನ್ನಡಪ್ರಭ

# ಜನವರಿಯಿಂದಲೇ ಕಸ ಶುಲ್ಕ ವಸೂಲಿ?

## ವಿರೋಧದ ನಡುವೆಯೂ ಮನೆ, ಹೋಟೆಲ್, ಕಲ್ಯಾಣ ಮಂಟಪ, ಮಾಲ್, ಆಸ್ಪತ್ರೆಗಳಿಗೆ ಕಸ ಸಂಗ್ರಹಕ್ಕೆ ಭಾರೀ ಶುಲ್ಕ

### ತಿಂಗಳಿಗೆ 200 ರು.ನಿಂದ 14,000 ರು.ವರೆಗೆ ಶುಲ್ಕ ವಸೂಲಿ | ಸೇವಾ ಶುಲ್ಕಕ್ಕೆ ಸರ್ಕಾರದಿಂದಲೂ ಅನುಮೋದನೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ವಿರೋಧದ ನಡುವೆ ನಗರದ ನಾಗರಿಕರು ಸೇರಿದಂತೆ ತ್ಯಾಜ್ಯ ಉತ್ಪಾದಕರಾದ ಹೋಟೆಲ್, ಕಲ್ಯಾಣ ಮಂಟಪ, ಆಸ್ಪತ್ರೆ, ಶಾಪಿಂಗ್ ಮಾಲ್‌ಗಳಿಂದ ಹೊಸ ವರ್ಷದಿಂದ ಕಸ ಸಂಗ್ರಹಕ್ಕಾಗಿ ಪ್ರತಿ ತಿಂಗಳು ಕನಿಷ್ಠ 200 ರು.ನಿಂದ 14 ಸಾವಿರದವರೆಗೆ ಶುಲ್ಕ ವಸೂಲಿಗೆ ಬಿಬಿಎಂಪಿ ಸಿದ್ಧತೆ ಮಾಡಿಕೊಳ್ಳುತ್ತಿದೆ.

ಈಗಾಗಲೇ ತೆರಿಗೆ ಸಂಗ್ರಹದಲ್ಲಿ ಇಳಿಕೆ, ಆದಾಯಕ್ಕಿಂತ ಹೆಚ್ಚು ವೆಚ್ಚ, ಗುತ್ತಿಗೆದಾರರಿಗೆ ಕೋಟ್ಯಂತರ ರು. ಬಾಕಿ ಮೊತ್ತ ಉಳಿಸಿಕೊಂಡಿರುವ ಪಾಲಿಕೆ ಈಗ ಹೊಸ ಸಂಪನ್ಮೂಲ ಕಂಡು ಕೊಳ್ಳಲು ತ್ಯಾಜ್ಯ ಸಂಗ್ರಹ ಶುಲ್ಕ ವಿಧಿಸಲು ಮುಂದಾಗಿದೆ.

ಬಿಬಿಎಂಪಿಯು ಕಸ ನಿರ್ವಹಣೆ ಉಪ ನಿಯಮ-2020ರ ಅನ್ವಯ ಸೇವಾ ಶುಲ್ಕ ವಸೂಲಿ ಮಾಡಲು ಮುಂದಾಗಿದ್ದು, ಇದಕ್ಕೆ ಇತ್ತೀಚೆಗೆ ಸರ್ಕಾರ ಅನುಮೋದನೆ ನೀಡಿದೆ. ಈ ನಿಯಮದಂತೆ ಪ್ರತಿ ಮನೆಗೆ ಬಿಬಿಎಂಪಿ ಮಾಸಿಕವಾಗಿ 200 ರು. ಶುಲ್ಕ ವಿಧಿಸಬಹುದು. ಜತೆಗೆ ವಾಣಿಜ್ಯ ತ್ಯಾಜ್ಯ ಉತ್ಪಾದಕರಾದ ಹೋಟೆಲ್, ಕಲ್ಯಾಣ ಮಂಟಪ, ಆಸ್ಪತ್ರೆ, ಶಾಪಿಂಗ್ ಮಾಲ್ ಸೇರಿದಂತೆ ಮೊದಲಾದ ಕಡೆ ಪ್ರತಿದಿನ ಉತ್ಪಾದನೆಯಾಗುವ ತ್ಯಾಜ್ಯದ ಆಧಾರದ ಮೇಲೆ ದರ ನಿಗದಿ ಪಡಿಸಲಾಗಿದೆ. ಐದರಿಂದ 100 ಕೆ.ಜಿ ವರೆಗೆ 500 ರು. ನಿಂದ 14 ಸಾವಿರ ರು. ಮಾಸಿಕ ಶುಲ್ಕ ನಿಗದಿ ಪಡಿಸಲಾಗಿದೆ. ಇದಕ್ಕೆ ಈ ಹಿಂದೆ ಬಿಬಿಎಂಪಿ ಸದಸ್ಯರು ಪಕ್ಷಾತೀತವಾಗಿ ವಿರೋಧ ವ್ಯಕ್ತಪಡಿಸಿದ್ದರು. ಆದರೂ ಈಗ ಜಾರಿಗೆ ತರಲು ಬಿಬಿಎಂಪಿ ಅಧಿಕಾರಿಗಳು ಮುಂದಾಗಿದ್ದಾರೆ.

| ಶುಲ್ಕ ಯಾರಿಗೆ ಎಷ್ಟು? | |
|---|---|
| ತ್ಯಾಜ್ಯ ಉತ್ಪಾದಕ ವರ್ಗ | ಶುಲ್ಕ (ಮಾಸಿಕ ರು.) |
| ಗೃಹ (ಎಲ್ಲಾ ಮನೆಗಳು) | 200 |
| ವಾಣಿಜ್ಯ ತ್ಯಾಜ್ಯ ಉತ್ಪಾದಕರಿಗೆ (ಮಾಸಿಕ ರು.) | |
| ದಿನಕ್ಕೆ 5 ಕೆ.ಜಿ ಗಿಂತ ಕಡಿಮೆ ಕಸ ಉತ್ಪಾದಕರಿಗೆ | 500 |
| ದಿನಕ್ಕೆ 5 ರಿಂದ 10 ಕೆ.ಜಿ ಕಸ ಉತ್ಪಾದಕರಿಗೆ | 1,400 |
| ದಿನಕ್ಕೆ 11 ರಿಂದ 25 ಕೆ.ಜಿ ಕಸ ಉತ್ಪಾದಕರಿಗೆ | 3,500 |
| ದಿನಕ್ಕೆ 26 ರಿಂದ 50 ಕೆ.ಜಿ ಕಸ ಉತ್ಪಾದಕರಿಗೆ | 7,000 |
| ದಿನಕ್ಕೆ 100 ಕೆ.ಜಿ. ಅದಕ್ಕಿಂತ ಹೆಚ್ಚು ಕಸ ಉತ್ಪಾದಕರಿಗೆ | 14,000 |

> ನಗರದ ತ್ಯಾಜ್ಯ ನಿರ್ವಹಣಾ ವೆಚ್ಚ ಹೆಚ್ಚಾಗಿರುವುದರಿಂದ ಹಾಗೂ ಬಿಬಿಎಂಪಿ ಘನತ್ಯಾಜ್ಯ ಬೈಲಾದಲ್ಲಿ ಸೇವಾ ಶುಲ್ಕ ವಿಧಿಸುವುದಕ್ಕೆ ಅವಕಾಶ ಇರುವ ಹಿನ್ನೆಲೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ.
>
> • **ಡಿ.ರಂದೀಪ್**
> ವಿಶೇಷ ಆಯುಕ್ತ

ಈ ಸೇವಾ ಶುಲ್ಕವನ್ನು ಬೆಸ್ಕಾಂ ವಿದ್ಯುತ್ ಬಿಲ್ ನೊಂದಿಗೆ ಮಾಸಿಕವಾಗಿ ಸಂಗ್ರಹಿಸುವುದಕ್ಕೆ ತೀರ್ಮಾನಿಸಲಾಗಿದೆ. ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕರ ಅಭಿಪ್ರಾಯ ಪಡೆಯುತ್ತಿದ್ದು, ಜನವರಿಯಿಂದ ವಿದ್ಯುತ್ ಬಿಲ್‌ನೊಂದಿಗೆ ಘನತ್ಯಾಜ್ಯ ಸೇವಾ ಶುಲ್ಕವೂ ಜಾರಿ ಸಾಧ್ಯತೆ ಇದೆ.

**ಬಡವರಿಗೆ ರಿಯಾಯಿತಿ:** ಮಾಸಿಕ 200 ರು. ಘನತ್ಯಾಜ್ಯ ಸೇವಾ ಶುಲ್ಕವನ್ನು ಬೆಸ್ಕಾಂ ಬಿಲ್ ನೊಂದಿಗೆ ವಸೂಲಿ ಸಿದ್ಧತೆ ಮಾಡಿಕೊಳ್ಳುತ್ತಿರುವ ಬಿಬಿಎಂಪಿ, ಮಾಸಿಕ 200 ರು.ಗಿಂತ ಕಡಿಮೆ ವಿದ್ಯುತ್ ಬಿಲ್ ಪಾವತಿದಾರರಿಗೆ ಶೇ.50 ರಷ್ಟು ಶುಲ್ಕ ರಿಯಾಯಿತಿ ನೀಡಲು ತೀರ್ಮಾನಿಸಿದೆ. 500 ರು.ಗಿಂತ ಹೆಚ್ಚಿನ ವಿದ್ಯುತ್ ಬಿಲ್ ಪಾವತಿದಾರರಿಗೆ ಪೂರ್ಣ 200 ರು. ಘನತ್ಯಾಜ್ಯ ಸೇವಾ ಶುಲ್ಕ ಪಾವತಿ ಮಾಡಬೇಕಾಗಲಿದೆ. 200 ರು.ನಿಂದ 500 ರು. ವರೆಗೆ ವಿದ್ಯುತ್ ಬಿಲ್ ಪಾವತಿದಾರರಿಗೆ ಶೇ.25 ರಷ್ಟು ರಿಯಾಯಿತಿ ನೀಡುವ ಬಗ್ಗೆ ಪಾಲಿಕೆ ಅಧಿಕಾರಿಗಳು ಚರ್ಚೆ ನಡೆಸುತ್ತಿದ್ದಾರೆ.

ಇನ್ನುಳಿದಂತೆ ತ್ಯಾಜ್ಯ ಉತ್ಪಾದಕರಿಗೆ ಯಾವುದೇ ರಿಯಾಯಿತಿ ಇರುವುದಿಲ್ಲ. ಅವರು ಪ್ರತಿದಿನ ಉತ್ಪಾದನೆ ಮಾಡುವ ತ್ಯಾಜ್ಯದ ಆಧಾರದ ಮೇಲೆ 1 ಸಾವಿರ ರು.ನಿಂದ 14 ಸಾವಿರ ರು. ವರೆಗೆ ಸೇವಾ ಶುಲ್ಕ ಪಾವತಿಸಬೇಕಾಗಲಿದೆ. ಇದರಿಂದ ಬಿಬಿಎಂಪಿಗೆ ವಾರ್ಷಿಕವಾಗಿ ಸುಮಾರು 600 ಕೋಟಿ ರು. ಸಂಗ್ರಹ ನಿರೀಕ್ಷೆ ಇದೆ ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದ್ದಾರೆ.



Edit with WPS Office

ಕನ್ನಡಪ್ರಭ

# ಕಟ್ಟಡ ನಕ್ಷೆ ಉಲ್ಲಂಘನೆ ಮಿತಿ ಮತ್ತಷ್ಟು ಸಡಿಲಿಕೆ?

## ಶೇ.5ರಿಂದ 15ಕ್ಕೆ ಹೆಚ್ಚಿಸಲು ಕೋರಿಕೆ

**ಬೆಂಗಳೂರು:** ನಗರದಲ್ಲಿ ಕಟ್ಟಡ ನಕ್ಷೆ ಉಲ್ಲಂಘನೆ ಮಿತಿಯನ್ನು ಶೇ.5ರಿಂದ ಶೇ.15ಕ್ಕೆ ಹೆಚ್ಚಿಸುವಂತೆ ಬಿಬಿಎಂಪಿ ಆಯುಕ್ತರು, ಆಡಳಿತಾಧಿಕಾರಿ ಗೌರವ್ ಗುಪ್ತಾ ಅವರಿಗೆ ಪ್ರಸ್ತಾವನೆ ಸಲ್ಲಿಸಿದ್ದಾರೆ.

ಕಟ್ಟಡ ನಿರ್ಮಾಣದ ವೇಳೆ ಬೆಂಗಳೂರು ಮಹಾನಗರ ಪಾಲಿಕೆ ಕಟ್ಟಡ ಉಪವಿಧಿ-2003 ನಿಯಮ ಅನುಸಾರ ಶೇ.5 ರಷ್ಟು ಮಾತ್ರ ವಿನಾಯಿತಿ ನೀಡಲಾಗುತ್ತಿತ್ತು. ಈ ಮಿತಿಯನ್ನು ಶೇ.15ಕ್ಕೆ ಹೆಚ್ಚಳ ಮಾಡಿ ತಿದ್ದುಪಡಿ ಮಾಡುವಂತೆ ಆಯುಕ್ತ ಎನ್.ಮಂಜುನಾಥ ಪ್ರಸಾದ್ ಪ್ರಸ್ತಾವನೆ ಸಲ್ಲಿಸಿದ್ದಾರೆ.

ನಗರದಲ್ಲಿ ಕಟ್ಟಡ ನಿರ್ಮಾಣ ಮಾಡುವ ಸಂದರ್ಭದಲ್ಲಿ ಶೇ.5ಕ್ಕಿಂತ ಹೆಚ್ಚಾಗಿ ಉಲ್ಲಂಘನೆ ಮಾಡಿ ಕಟ್ಟಡ ನಿರ್ಮಾಣ ಮಾಡುತ್ತಿರುವುದು ಕಂಡುಬಂದಿದೆ. ಶೇ.5ಕ್ಕಿಂತ ಹೆಚ್ಚು ಕಟ್ಟಡ ನಿಯಮ ಉಲ್ಲಂಘನೆಯಾದರೆ, ಅಲ್ಲದೆ, ಸ್ವಾಧೀನಾನುಭವ ಪತ್ರವಿಲ್ಲದೆ ಇರುವಂತಹ ಕಟ್ಟಡಗಳಿಗೆ ಬೆಸ್ಕಾಂ ಇಲಾಖೆಯಿಂದ ವಿದ್ಯುತ್ ಸಂಪರ್ಕ ನೀಡದೆ ಇರುವುದು ಸಹ ಗಣನೀಯವಾಗಿ ಏರಿಕೆಯಾಗಿದೆ. ಇದರಿಂದ ನಗರದಲ್ಲಿ ಹಲವು ಮನೆಗಳ ಮಾಲೀಕರು ಸಮಸ್ಯೆ ಎದುರಿಸುತ್ತಿದ್ದಾರೆ. ಒಟ್ಟಾರೆ ಪಾಲಿಕೆಯ ಆದಾಯಕ್ಕೆ ಅಡ್ಡಿ ಉಂಟಾಗಲಿದೆ ಎಂಬ ಕಾರಣಕ್ಕೆ ಈ ತಿದ್ದುಪಡಿ ಅವಶ್ಯಕವಾಗಿದೆ ಎಂದು ಪ್ರಸ್ತಾವನೆಯಲ್ಲಿ ತಿಳಿಸಲಾಗಿದೆ. ಈ ತಿದ್ದುಪಡಿ ಜಾರಿಯಾದರೆ ಶೇ.5ಕ್ಕಿಂತ ಹೆಚ್ಚು ನಕ್ಷೆ ಉಲ್ಲಂಘಿಸಿ ನಿರ್ಮಾಣಗೊಂಡ ಕಟ್ಟಡಗಳಿಗೆ ಅನ್ವಯವಾಗುವುದಿಲ್ಲ.



Edit with WPS Office

VK
ವಿಜಯ ಕರ್ನಾಟಕ

# ಕಸ ಸಂಗ್ರಹಣೆ ಶುಲ್ಕ ವಸೂಲಿ ವಿರೋಧಿಸಿ ಕಾಂಗ್ರೆಸ್ ಪ್ರತಿಭಟನೆ

**ವಿಕ ಸುದ್ದಿಲೋಕ** ಬೆಂಗಳೂರು

ಕಸ ನಿರ್ವಹಣೆಗಾಗಿ ಬಳಕೆದಾರರ ಸೇವಾ ಶುಲ್ಕ ವಿಧಿಸಲು ಮುಂದಾಗಿರುವ ಬಿಬಿಎಂಪಿ ಕ್ರಮವನ್ನು ಖಂಡಿಸಿ ಕಾಂಗ್ರೆಸ್ ಕಾರ್ಯಕರ್ತರು ನಗರದ ಮೌರ್ಯ ವೃತ್ತದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು.

ಬಿಜೆಪಿ ಸರಕಾರದ ದುರಾಡಳಿತದಿಂದ ಜನರು ನಲುಗಿ ಹೋಗಿದ್ದು, ಹಲವು ತೆರಿಗೆಗಳ ಭಾರ ಹೊರುವಂತಾಗಿದೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ತ್ಯಾಜ್ಯ ನಿರ್ವಹಣೆಗೆ ವಸತಿ ಮತ್ತು ವಾಣಿಜ್ಯ ಕಟ್ಟಡಗಳಿಂದ ಪ್ರತಿ ತಿಂಗಳು ವಿದ್ಯುತ್ ಬಿಲ್ ಜತೆಗೆ ಕಸ ಸಂಗ್ರಹಣಾ ಶುಲ್ಕ ವಸೂಲಿ ಮಾಡಲು ಮುಂದಾಗಿರುವುದು ಸರಿಯಲ್ಲ ಎಂದು ಪ್ರತಿಭಟನಾನಿರತರು ಆಕ್ರೋಶ ವ್ಯಕ್ತಪಡಿಸಿದರು.

''ಹಿಂಬಾಗಿಲ ಮೂಲಕ ಅಧಿಕಾರ ಹಿಡಿದ ಬಿಜೆಪಿಯು ಜನ ವಿರೋಧಿ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದೆ. ಮನೆ ಮನೆಯಿಂದ ಕಸ ಸಂಗ್ರಹಿಸುವ ಕಾರ್ಯಕ್ಕೆ ಬಳಕೆದಾರರ ಶುಲ್ಕ ವಿಧಿಸುವ ತೀರ್ಮಾನವನ್ನು ಕೈಬಿಡಬೇಕು. ಇಲ್ಲವಾದಲ್ಲಿ ಉಗ್ರ ಹೋರಾಟ ನಡೆಸಲಾಗುವುದು,'' ಎಂದು ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಎಚ್ಚರಿಕೆ ನೀಡಿದರು.

ಬೆಂಗಳೂರು ಕೇಂದ್ರ, ದಕ್ಷಿಣ ಮತ್ತು ಉತ್ತರ ಜಿಲ್ಲಾ ಕಾಂಗ್ರೆಸ್ ಸಮಿತಿಗಳು ಜಂಟಿಯಾಗಿ ನಡೆಸಿದ ಪ್ರತಿಭಟನಾ ಸಭೆಯಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹಮ್ಮದ್, ಮಾಜಿ ಸಚಿವ ರಾಮಲಿಂಗಾರೆಡ್ಡಿ, ಶಾಸಕಿ ಸೌಮ್ಯ ರೆಡ್ಡಿ ಮತ್ತಿತರರು ಭಾಗವಹಿಸಿದ್ದರು.



Edit with WPS Office

ವಿಜಯವಾಣಿ

ವಿಜಯವಾಣಿ ನಂ.1

# 29ರಿಂದ ಪಾಲಿಕೆ ನೌಕರರ ಅನಿರ್ದಿಷ್ಟಾವಧಿ ಮುಷ್ಕರ

**ಬೆಂಗಳೂರು:** ಬಿಬಿಎಂಪಿಯಲ್ಲಿ ಪ್ರಸ್ತುತ ವೃಂದ ಮತ್ತು ನೇಮಕಾತಿ ನಿಯಮಾವಳಿ ತಿದ್ದುಪಡಿ ಸೇರಿ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ 29ರಿಂದ ಬಿಬಿಎಂಪಿ ನೌಕರರ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು ಮುಷ್ಕರ ನಡೆಸಲು ತೀರ್ಮಾನಿಸಿದ್ದಾರೆ.

» ವೃಂದ, ನೇಮಕಾತಿ ನಿಯಮ ತಿದ್ದುಪಡಿಗೆ ಆಗ್ರಹ

ಪಾಲಿಕೆಯಲ್ಲಿ ವೃಂದ ಮತ್ತು ನೇಮಕಾತಿ ನಿಯಮಾವಳಿಯಲ್ಲಿ ಹಲವು ಗೊಂದಲವಿದ್ದು, ನ್ಯೂನತೆ ಸರಿಪಡಿಸಲು ಅನೇಕ ಬಾರಿ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ. ಕೊನೆಯ ಬಾರಿಗೆ ತಿದ್ದುಪಡಿ ಮಾಡಲು ಮನವಿ ಮಾಡುತ್ತಿದ್ದು, ಕ್ರಮ ವಹಿಸದಿದ್ದಲ್ಲಿ 29 ರಿಂದ ಮುಷ್ಕರ ನಡೆಸಲಾಗುವುದು ಎಂದು ನಗರಾಭಿವೃದ್ಧಿ ಇಲಾಖೆಗೆ ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಸಂಘದ ಅಧ್ಯಕ್ಷ ಎ. ಅಮೃತ್‌ರಾಜ್ ಪತ್ರ ಬರೆದಿದ್ದಾರೆ.

ಪಾಲಿಕೆ ವೃಂದ ಮತ್ತು ನೇಮಕಾತಿ ನಿಯಮದಲ್ಲಿ 'ಎ' ಶ್ರೇಣಿ ಅಧಿಕಾರಿಗಳನ್ನು ಸರ್ಕಾರ ನೇಮಕಾತಿ ಮಾಡುತ್ತಿದ್ದು, ಇದನ್ನು ಪಾಲಿಕೆ ಆಯುಕ್ತರಿಗೆ ನೀಡಬೇಕು. ಇದರಿಂದ ಅರ್ಹ ಅಧಿಕಾರಿಗಳಿಗೆ ಸೇವಾ ಮುಂಬಡ್ತಿ, ವರ್ಗಾವಣೆ, ಗಳಿಕೆ ರಜೆ ನಗದೀಕರಣ, ನಿವೃತ್ತಿ ಅನುಮತಿ, ವಾರ್ಷಿಕ ವೇತನ ಬಡ್ತಿ ಸೌಲಭ್ಯ ದೊರೆಯುತ್ತವೆ ಎಂದು ಹೇಳಿದ್ದಾರೆ. 2007 ರಿಂದ ಸಮಾನ ಕೆಲಸಕ್ಕೆ ಸಮಾನ ವೇತನದಡಿ ಕೆಲಸ ಮಾಡುತ್ತಿರುವ ನೌಕರರನ್ನು ಕಾಯಂ ಮಾಡಬೇಕು. ವಿದ್ಯಾಧಿಕಾರಿ ಹುದ್ದೆಯನ್ನು ಉಪ ನಿರ್ದೇಶಕರ ಹುದ್ದೆಯ ಮೇಲ್ದರ್ಜೆಗೆ ಹೆಚ್ಚಿಸಬೇಕು ಎಂದು ಆಗ್ರಹಿಸಿದ್ದಾರೆ.

**ಪರಿಹಾರ ನೀಡಿ:** ಕೋವಿಡ್‌ನಿಂದ ಮೃತಪಟ್ಟ ಪಾಲಿಕೆ ನೌಕರರ ಅವಲಂಬಿತರಿಗೆ 30 ಲಕ್ಷ ರೂ. ಜೀವವಿಮೆ ನೀಡಬೇಕು. ನಿವೃತ್ತಿ ವೇತನ, ಉಪಧನ, ಅನುಕಂಪದ ಆಧಾರದಲ್ಲಿ ಕುಟುಂಬ ಸದಸ್ಯರಿಗೆ ನೌಕರಿ ಕೊಡಬೇಕು ಎಂದು ಕೋರಿದ್ದಾರೆ.

Bengaluru Edition
Dec 17, 2020 Page No. 2
Powered by : eReleGo.com

Edit with WPS Office

ವಿಜಯವಾಣಿ

ವಿಜಯವಾಣಿ ನಂ.1

# ಉಲ್ಲಂಘನೆ ಮಿತಿ ಹೆಚ್ಚಳ ಸಾಧ್ಯತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಕಟ್ಟಡ ನಿರ್ಮಾಣ ನಿಯಮ ಉಲ್ಲಂಘನೆ ಮಿತಿಯನ್ನು ಶೇ.5ರಿಂದ ಶೇ.15ಕ್ಕೆ ಹೆಚ್ಚಿಸುವಂತೆ ಆಡಳಿತಾಧಿಕಾರಿ ಗೌರವ್ ಗುಪ್ತಗೆ ಆಯುಕ್ತ ಮಂಜುನಾಥ ಪ್ರಸಾದ್ ಪ್ರಸ್ತಾವನೆ ಸಲ್ಲಿಸಿದ್ದಾರೆ.

ನಗರದಲ್ಲಿ ಕಟ್ಟಡ ನಿರ್ಮಾಣ ಸಂದರ್ಭದಲ್ಲಿ ಬಿಬಿಎಂಪಿ ಕಟ್ಟಡ ಉಪವಿಧಿ-2003 ನಿಯಮದನ್ವಯ ಶೇ.5 ಕಟ್ಟಡ ನಕ್ಷೆ ಉಲ್ಲಂಘನೆಗೆ ವಿನಾಯಿತಿಯಿದೆ. ಇದಕ್ಕಿಂತ ಹೆಚ್ಚಿನ ಉಲ್ಲಂಘನೆಯಾಗಿದ್ದಲ್ಲಿ ಅಕ್ರಮ ಕಟ್ಟಡವೆಂದು ಪರಿಗಣಿಸಿ ಸ್ವಾಧೀನಾನುಭವ ಪ್ರಮಾಣಪತ್ರ ನೀಡುವುದಿಲ್ಲ. ಪಾಲಿಕೆಯಿಂದ ಸ್ವಾಧೀನಾನುಭವ ಪಡೆಯದ ಕಟ್ಟಡಗಳಿಗೆ ಬೆಸ್ಕಾಂನಿಂದ ವಿದ್ಯುತ್ ಸಂಪರ್ಕ ನೀಡುವುದಿಲ್ಲ. ಇದರಿಂದ ಅನೇಕ ಮನೆಗಳ ಮಾಲೀಕರು ಸಮಸ್ಯೆ ಎದುರಿಸುತ್ತಿದ್ದಾರೆ. ಜತೆಗೆ, ಪಾಲಿಕೆಯ ಆದಾಯದ ಮೂಲಕ್ಕೂ ಹಿನ್ನಡೆ ಉಂಟಾಗಿದೆ. ಹೀಗಾಗಿ, ಕಟ್ಟಡ ನಕ್ಷೆ ಮತ್ತು ಕಟ್ಟಡ ಉಪವಿಧಿ ನಿಯಮ ಉಲ್ಲಂಘನೆ ಮಿತಿಯನ್ನು ಶೇ.15ಕ್ಕೆ ಹೆಚ್ಚಳ ಮಾಡಲು ತಿದ್ದುಪಡಿ ತರುವಂತೆ ಆಯುಕ್ತರು ಮನವಿ ಮಾಡಿದ್ದಾರೆ. ಶೇ.15ಕ್ಕೆ ಏರಿಕೆ ಮಾಡಿದರೆ, ಮಾಲೀಕರಿಗೆ ಉಲ್ಲಂಘನೆ ದಂಡ ವಿಧಿಸಿ, ಸ್ವಾಧೀನಾನುಭವ ಪ್ರಮಾಣ ಪತ್ರ ನೀಡಿ ಕ್ರಮಬದ್ಧಗೊಳಿಸಬಹುದು. ಇದರಿಂದ ಪಾಲಿಕೆಗೆ ಆದಾಯ ಬರಲಿದೆ ಎಂದು ಪ್ರಸ್ತಾವನೆಯಲ್ಲಿ ತಿಳಿಸಿದ್ದಾರೆ.

» ಬಿಬಿಎಂಪಿ ವ್ಯಾಪ್ತಿಯಲ್ಲಿ ಕಟ್ಟಡ ನಿರ್ಮಾಣ



## ಹೊಸ ಕಟ್ಟಡಗಳಿಗೆ ಅನ್ವಯ

ನಗರದಲ್ಲಿ ಈಗಾಗಲೇ ಶೇ.5ಕ್ಕಿಂತ ಹೆಚ್ಚು ನಕ್ಷೆ ಉಲ್ಲಂಘಿಸಿ ನಿರ್ಮಾಣಗೊಂಡು ಸ್ವಾಧೀನಾನುಭವ ಪತ್ರ ಪಡೆದ ಕಟ್ಟಡಗಳಿಗೆ ಶೇ.15 ನಿಯಮ ಉಲ್ಲಂಘನೆ ವಿನಾಯಿತಿ ಅನ್ವಯವಾಗುವುದಿಲ್ಲ. ಈ ಕಟ್ಟಡಗಳು ಅಕ್ರಮ-ಸಕ್ರಮದಡಿಯಲ್ಲಿ ಬರಲಿವೆ. ಆದರೆ, ನಿಯಮ ಜಾರಿಗೆ ಬಂದ ನಂತರ ನಿರ್ಮಾಣವಾಗುವ ಹೊಸ ಕಟ್ಟಡಗಳು ಹಾಗೂ ಸ್ವಾಧೀನಾನುಭವ ಪ್ರಮಾಣ ಪತ್ರಕ್ಕೆ ಅರ್ಜಿ ಸಲ್ಲಿಕೆ ಮಾಡುವ ಕಟ್ಟಡಗಳಿಗೆ ಮಾತ್ರ ಶೇ.15 ಕಟ್ಟಡ ನಿಯಮ ಉಲ್ಲಂಘನೆ ಅನ್ವಯವಾಗಲಿದೆ ಎಂದು ಮಂಜುನಾಥಪ್ರಸಾದ್ ತಿಳಿಸಿದ್ದಾರೆ.

Bengaluru Edition
Dec 17, 2020 Page No. 4
Powered by : eReleGo.com

Edit with WPS Office

ವಿಜಯವಾಣಿ
ಕನ್ನಡದ ಧ್ವನಿ

ವಿಜಯವಾಣಿ ನಂ.1
ಕನ್ನಡ ದಿನಪತ್ರಿಕೆ

# ಬೆಂಗಳೂರು ಬದಲಿಸಲು ನೀಲಿನಕ್ಷೆ

## ರಸ್ತೆ, ಪಾರ್ಕ್, ಕಾಲುವೆ, ಕೆರೆ ಬಗ್ಗೆ ಗಮನ | ಚುನಾವಣೆಗೆ ಸಿದ್ಧತೆ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಚುನಾವಣೆ ಮೇಲೆ ಕಣ್ಣಿಟ್ಟಿರುವ ಸರ್ಕಾರ, ತಾಲೀಮು ಆರಂಭಿಸಿದೆ. ಮೊದಲ ಪ್ರಯತ್ನವಾಗಿ ಬಿಜೆಪಿಯು ಸಂಘಟನಾ ಚಟುವಟಿಕೆ ಪ್ರತಿ ವಿಧಾನಸಭಾ ಕ್ಷೇತ್ರವಾರು ನಡೆಸಿದೆ. ಇತ್ತ ಸರ್ಕಾರವು ರಾಜಧಾನಿಯ ಜನರ ಮುಂದೆ ಯೋಜನೆಗಳ ಭೂರಿ ಭೋಜನ ಉಣಬಡಿಸುವ ಪ್ರಸ್ತಾಪ ಮಂಡಿಸಲು ತಯಾರಿ ಮಾಡಿಕೊಂಡಿದೆ.

ಇತ್ತೀಚೆಗೆ ನಡೆದ ಗ್ರೇಟರ್ ಹೈದರಾಬಾದ್ ಚುನಾವಣೆಯಲ್ಲಿ ಬಿಜೆಪಿ ಜಿದ್ದಾಜಿದ್ದಿ ಹೋರಾಟ ನಡೆಸಿದ್ದು ರಾಷ್ಟ್ರಮಟ್ಟದಲ್ಲಿ ಸುದ್ದಿಯಾಗಿತ್ತು. ಗೋವಾದ ಸ್ಥಳೀಯ ಸಂಸ್ಥೆ ಚುನಾವಣೆಯನ್ನೂ ಗಂಭೀರವಾಗಿ ಪರಿಗಣಿಸಿ ಗೆಲುವು ಸಾಧಿಸಿತ್ತು. ಬಿಬಿಎಂಪಿ ಚುನಾವಣೆಯನ್ನೂ ದೆಹಲಿ ನಾಯಕರು ಗಂಭೀರವಾಗಿ ಪರಿಗಣಿಸುವುದು ಸ್ಪಷ್ಟ. ಈ ಕಾರಣಕ್ಕೆ ಸರ್ಕಾರ ತನ್ನ ಪ್ರಯತ್ನವನ್ನು ಈಗಿನಿಂದಲೇ ಆರಂಭಿಸುತ್ತಿದೆ.

» ಇಂದು ಸಿಎಂ ಸುದ್ದಿಗೋಷ್ಠಿ

ಕರೊನಾದಿಂದ ಚೇತರಿಕೆ ಹಾದಿಯಲ್ಲಿರುವ ಬೆಂಗಳೂರಿನಲ್ಲಿ ಮುಂದೆ ತಾವೇನು ಮಾಡುವವರಿದ್ದೇವೆ ಎಂದು ಬಣ್ಣಬಣ್ಣದ ಆಶಯ ಬಿತ್ತಲು, ಜನರಲ್ಲಿ ಸರ್ಕಾರದ ಬಗ್ಗೆ ಧನಾತ್ಮಕ ಭಾವನೆ ಹೆಚ್ಚಿಸುವ ಉದ್ದೇಶದಿಂದ ಹೊಸ ಹೊಸ ಯೋಜನೆ ರೂಪಿಸಲು ನೀಲಿನಕ್ಷೆ ಸಿದ್ಧಪಡಿಸಿಕೊಂಡಿದೆ. ಇದನ್ನು ಸಿಎಂ ಯಡಿಯೂರಪ್ಪ ಗುರುವಾರ (ಡಿ.17) ಬಹಿರಂಗಪಡಿಸಲಿದ್ದಾರೆ.

ಒಂದು ಕಡೆ ಎಷ್ಟೇ ಪ್ರಮಾಣದಲ್ಲಿ ಕೆರೆ ಒತ್ತುವರಿ ಆಗುತ್ತಿದ್ದರೂ ಕೆರೆ ಹಾಗೂ ಬೆಂಗಳೂರಿನ ಜನರಿಗೆ ಅವಿನಾಭಾವ ಸಂಬಂಧವಿದೆ. ಕೆರೆಗಳು ಅಭಿವೃದ್ಧಿಯಾಗಬೇಕೆಂಬ ಜನರ ಆಶಯಕ್ಕೆ ಮನ್ನಣೆ ನೀಡಲು ವಿಶೇಷ ಕಾರ್ಯಕ್ರಮವೊಂದು ತಯಾರಾಗಿದೆ. ನೂರಾರು ಕೆರೆಗಳು ನಾಪತ್ತೆಯಾಗಿದೆಯಾದರೂ ಉಳಿದಿರುವ ಕೆರೆಗಳನ್ನು ಸಂರಕ್ಷಿಸಿ ಉಳಿಸಿಕೊಳ್ಳುವ ನಿಟ್ಟಿನಲ್ಲಿ ಯೋಜನೆ ತಯಾರಾಗಿದೆ.

ರಸ್ತೆ ಅಕ್ಕಪಕ್ಕದ ಕಾಮಗಾರಿ, ಅತಿಯಾದ ಮಳೆ ಮತ್ತಿತರ ಕಾರಣಕ್ಕೆ ಗುಂಡಿಬಿದ್ದ ರಸ್ತೆಗಳನ್ನು ಅಭಿವೃದ್ಧಿಪಡಿಸುವುದು, ವಾಹನದಟ್ಟಣೆಯಿಂದ ಸವಾರರಿಗೆ ಆಗುತ್ತಿರುವ ಕಿರಿಕಿರಿ ತಪ್ಪಿಸಲು ರಸ್ತೆ ವಿಸ್ತರಣೆ ಮತ್ತು ಪರ್ಯಾಯ ವ್ಯವಸ್ಥೆ, ಹೊರವರ್ತುಲ ರಸ್ತೆಗೆ ಒತ್ತುಕೊಡುವುದು ಸೇರಿ ರಸ್ತೆ ಬಗ್ಗೆಯೇ ಹೆಚ್ಚು ಗಮನ ನೀಡಿ ಯೋಜನೆ ಸಿದ್ಧಪಡಿಸಿದ್ದು, ನಿಗದಿತ ಕಾಲಮಿತಿಯಲ್ಲಿ ಪೂರ್ಣಗೊಳಿಸುವ ಆಶಯ ಸರ್ಕಾರದ್ದಾಗಿದೆ.

ಮೈಸೂರ್ ಲ್ಯಾಂಪ್ಸ್ ಕಾರ್ಖಾನೆ ಮುಚ್ಚಿದ ನಂತರ ಅಲ್ಲಿನ ಜಾಗ ಬಳಸಿಕೊಳ್ಳುವ ಬಗ್ಗೆ ವಿವಿಧ ಚರ್ಚೆ ನಡೆದಿತ್ತು. ಈ ಜಾಗವನ್ನು ಜನರ ಉಪಯೋಗಕ್ಕೆ ಬಳಸಿಕೊಳ್ಳಲು ಮೀಸಲಿಡಬೇಕೆಂದು ಸಂಪುಟದಲ್ಲಿ ನಿರ್ಣಯಿಸಲಾಗಿದೆ. ಮಾದರಿ ಬಸ್ ನಿಲ್ದಾಣ, ಜಯದೇವ ಮಾದರಿ ಆಸ್ಪತ್ರೆ ನಿರ್ಮಾಣ, ಟ್ರೀಪಾರ್ಕ್ ಹೀಗೆ ವಿವಿಧ ಆಲೋಚನೆಗಳು ಸರ್ಕಾರದ ಮುಂದೆ ಬಂದಿತ್ತು. ಅಂತಿಮವಾಗಿ ಕಬ್ಬನ್‌ಪಾರ್ಕ್, ಲಾಲ್‌ಬಾಗ್ ಮಾದರಿಯಲ್ಲಿ ಅಭಿವೃದ್ಧಿಪಡಿಸಿ ಹಸಿರೀಕರಣ ಮಾಡುವ ಉದ್ದೇಶ ಹೊಂದಲಾಗಿದೆ.



### ತಜ್ಞರ ಸಲಹೆ ಮೇರೆಗೆ ಕ್ರಮ

ಬೆಂಗಳೂರಿನ ತಕ್ಷಣದ ಅಗತ್ಯವೇನು, ಜನರ ಬಯಕೆ ಏನು ಎಂಬುದರ ಬಗ್ಗೆ ಸರ್ಕಾರಕ್ಕೆ ತಜ್ಞರ ಸಮಿತಿ ಶಿಫಾರಸು ಮಾಡಿದೆ. ಆ ಶಿಫಾರಸಿನ ಆಧಾರದಲ್ಲಿ ನೀಲಿನಕ್ಷೆಯನ್ನು ಸಿದ್ಧಪಡಿಸಿದ್ದು, ಸರ್ಕಾರದ ಅದನ್ನು ತಕ್ಷಣವೇ ಜನರ ಮುಂದೆ ಪ್ರಸ್ತಾಪಿಸಿ ಚರ್ಚೆಗೆ ಬಿಡುತ್ತಿದೆ.

### ಸರ್ಕಾರ ಮಾಡಲು ಹೊರಟಿರುವುದೇನು?

1 ಬಡ ಹಾಗೂ ಬಡ ಮಧ್ಯಮ ವರ್ಗದವರನ್ನು ಗಮನದಲ್ಲಿಟ್ಟುಕೊಂಡು ಅರ್ಕಾವತಿ ಬಡಾವಣೆಯ ನಿವೇಶನ ಹಂಚಿಕೆ ಪ್ರಕ್ರಿಯೆಗೆ ವೇಗ

2 ಬೆಂಗಳೂರನ್ನು ವ್ಯಾಪಿಸಿ ಕೊಂಡಿರುವ ರಾಜಕಾಲುವೆ, ನೀರು ಹರಿಯುವ ಕಾಲುವೆ ಸುಂದರೀಕರಣ.

3 ರಸ್ತೆ ಅಭಿವೃದ್ಧಿಗೆ ದೊಡ್ಡಮಟ್ಟದ ಯೋಜನೆ ರೂಪಿಸುವುದು, ಸಾಧ್ಯವಾದಷ್ಟು ರಸ್ತೆಗಳನ್ನು ಶೀಘ್ರವೇ ಡಾಂಬರೀಕರಣಗೊಳಿಸುವುದು.

4 ಟ್ವಿನ್ ಟವರ್ ಸ್ಥಾಪನೆ ಮೂಲಕ ಸರ್ಕಾರಿ ಕಚೇರಿಗಳನ್ನು ಒಂದೇ ಸೂರಿನಡಿ ತರುವುದು.

5 ಮೈಸೂರು ಲ್ಯಾಂಪ್ಸ್ ಜಾಗದಲ್ಲಿ ಬೃಹತ್ ಉದ್ಯಾನ, ಟ್ರೀಪಾರ್ಕ್ ಸ್ಥಾಪನೆ ಮಾಡುವುದು.

### ಚುನಾವಣೆಗೆ ಮುನ್ನೋಟ

ಬಿಬಿಎಂಪಿಗೆ ಇಷ್ಟರಲ್ಲೇ ಚುನಾವಣೆ ನಡೆಯಬೇಕಿತ್ತು. ಆದರೆ, ಸರ್ಕಾರ ಹೊಸ ಕಾಯ್ದೆ ತಂದು ಚುನಾವಣೆ ಮುಂದೂಡಲು ಬಯಸಿದೆ. ಇನ್ನಷ್ಟು ವಾರ್ಡ್ ಹೆಚ್ಚಿಸಿ ಮರುವಿಂಗಡಣೆ ಮಾಡಿ ನಂತರ ಚುನಾವಣೆ ನಡೆಸಲು ಬಯಸಿದೆ. ಈ ನಡುವೆ ನ್ಯಾಯಾಲಯ ಚುನಾವಣೆ ಮುಂದೂಡಬಾರದೆಂದು ಹೇಳಿದೆ. ಆದರೂ ಸರ್ಕಾರ ಬಿಬಿಎಂಪಿ ಕಾಯ್ದೆ ರಚಿಸಿ ಸಹಿಗಾಗಿ ರಾಜ್ಯಪಾಲರಿಗೆ ಕಳಿಸಿದೆ. ಕಾಯ್ದೆ ರೂಪ ಪಡೆದುಕೊಂಡ ಬಳಿಕ ನ್ಯಾಯಾಲಯದ ಮುಂದೆ ಹಾಜರುಪಡಿಸಿ ಚುನಾವಣೆ ಮುಂದೂಡಲು ಅವಕಾಶ ಕೋರಲಿದೆ. ಒಂದು ವೇಳೆ ಅವಕಾಶ ಸಿಗದಿದ್ದಲ್ಲಿ ತಕ್ಷಣವೇ ಚುನಾವಣೆ ಘೋಷಣೆಯಾಗಿ ನೀತಿಸಂಹಿತೆ ಜಾರಿಯಾಗಬಹುದು. ಆ ನಂತರ ಯಾವುದೇ ಹೊಸ ಯೋಜನೆ ಘೋಷಣೆ ಅಸಾಧ್ಯ. ಈ ಕಾರಣಕ್ಕೆ ಪೂರ್ವ ಸಿದ್ಧತೆ ರೂಪದಲ್ಲಿ ಒಂದಷ್ಟು ಯೋಜನೆ ಘೋಷಿಸಲು ಬಯಸಿದೆ ಎಂದು ಉನ್ನತ ಮೂಲಗಳು ತಿಳಿಸಿವೆ.



Edit with WPS Office

ಉದಯವಾಣಿ
ಜನಮನದ ಜೀವನಾಡಿ

# ಬಿಬಿಎಂಪಿ ವಿರುದ್ಧ ಕೈ ಕಿಡಿ

**ಬೆಂಗಳೂರು:** ಬಿಬಿಎಂಪಿ ಸಂಗ್ರಹಕ್ಕೂ ಶುಲ್ಕ ವಿಧಿಸುತ್ತಿರುವುದು ಅವೈಜ್ಞಾನಿಕವಾಗಿದ್ದು, ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ ಎಂದು ಆರೋಪಿಸಿ ಕಾಂಗ್ರೆಸ್ ನಾಯಕರು ಪ್ರತಿಭಟನೆ ನಡೆಸಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹಮದ್ ಅವರ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಎಐಸಿಸಿ ಕಾರ್ಯದರ್ಶಿ ದಿನೇಶ್ ಗುಂಡೂರಾವ್, ರಾಜ್ಯಸಭಾ ಸದಸ್ಯರಾದ ಜಿ.ಸಿ.ಚಂದ್ರಶೇಖರ್, ಶಾಸಕರಾದ ರಾಮಲಿಂಗಾರೆಡ್ಡಿ, ರಿಜ್ವಾನ್ ಅರ್ಷದ್, ಸೌಮ್ಯಾರೆಡ್ಡಿ, ವಿಧಾನ ಪರಿಷತ್ ಸದಸ್ಯ, ಬಿ.ಕೆ.ಹರಿಪ್ರಸಾದ್, ಪಕ್ಷದ ಮುಖಂಡರು ಪಾಲ್ಗೊಂಡಿದ್ದರು.

ರಾಜ್ಯಸಭಾ ಸದಸ್ಯ ಜಿ.ಸಿ.ಚಂದ್ರಶೇಖರ್ ಮಾತನಾಡಿ, ಬಿಬಿಎಂಪಿ ಕಸ ಸಂಗ್ರಹಕ್ಕೆ 200 ರೂ. ರಿಂದ 14000 ರೂ.ವರೆಗೆ ಶುಲ್ಕ ಹೆಚ್ಚಿಸುತ್ತಾರೆ. ದೇಶದ ಬೇರೆ ನಗರಗಳಲ್ಲಿ ಈ ರೀತಿ ಶುಲ್ಕವಿಲ್ಲ ಎಂದರು.

ವಿಧಾನ ಪರಿಷತ್ ಸದಸ್ಯ ಎಂ.ನಾರಾಯಣಸ್ವಾಮಿ, ರಾಜ್ಯ ಸರ್ಕಾರ [illegible] ಎಂದು ದೂರಿದರು.

**ಅಧಿಕಾರಕ್ಕೆ:** ಬೆಂಗಳೂರಿನ [illegible] ಎಂದು ರಾಜ್ಯ ಸಭಾ ಸದಸ್ಯ ಜಿ.ಸಿ.ಚಂದ್ರಶೇಖರ್ ಹೇಳಿದರು.

**ಸೆಸ್ ಅಲ್ಲ ಸೇವಾ ಶುಲ್ಕ:** ಪ್ರತಿಕ್ರಿಯಿಸಿದ ಬಿಬಿಎಂಪಿ ವಿಶೇಷ (ಘನತ್ಯಾಜ್ಯ ನಿರ್ವಹಣೆ) ಆಯುಕ್ತ ಡಿ.ರಂದೀಪ್, ಇದು ಕಸದ ಸೆಸ್ ಅಲ್ಲ, ನಿರ್ವಹಣಾ ಸೇವಾ ಶುಲ್ಕ. ಸೇವಾ ಶುಲ್ಕ ಮೊತ್ತವನ್ನು ಕಡಿಮೆ ಮಾಡುವುದು ಅಥವಾ ರದ್ದು ಮಾಡುವ ಅಧಿಕಾರ ಸರ್ಕಾರಕ್ಕೆ ಇದೆ ಎಂದು ಹೇಳಿದರು.

Edit with WPS Office

ಹೊಸ ದಿಗಂತ

ಹೊಸ ದಿಗಂತ



17 Dec 2020

ಕಸ ನಿರ್ವಹಣೆಗೆ ವರ್ಷಕ್ಕೆ ಸಾವಿರ ಕೋಟಿ ರೂಪಾಯಿ ವೆಚ್ಚ: ರಂದೀಪ್

# ಸೇವಾ ಶುಲ್ಕ ಸಂಗ್ರಹಕ್ಕೆ ಬಿಬಿಎಂಪಿ ನಿರ್ಧಾರ

**ಬೆಂಗಳೂರು:** ಬಿಬಿಎಂಪಿ ವ್ಯಾಪ್ತಿಯಲ್ಲಿ ಪ್ರತಿ ವರ್ಷ ಸಾವಿರ ಕೋಟಿ ರೂಪಾಯಿಯನ್ನು ಕಸ ನಿರ್ವಹಣೆಗೆ ವೆಚ್ಚ ಮಾಡುತ್ತಿದೆ. ಹೀಗಾಗಿ, ಸೇವಾ ಶುಲ್ಕ ಸಂಗ್ರಹಿಸಲು ನಿರ್ಧರಿಸಲಾಗಿದೆ ಎಂದು ಬಿಬಿಎಂಪಿಯ ವಿಶೇಷ (ಘನತ್ಯಾಜ್ಯ ನಿರ್ವಹಣೆ) ಆಯುಕ್ತ ಡಿ. ರಂದೀಪ್ ತಿಳಿಸಿದರು.

[illegible]

## ಕಾಂಗ್ರೆಸ್‌ನಿಂದ ಪ್ರತಿಭಟನೆ

[illegible]



### ಗೌರವ್‌ಗುಪ್ತಾಗೆ ಮನವಿ ಸಲ್ಲಿಸಿದ ಕೈ ನಿಯೋಗ

[illegible]

Edit with WPS Office

ಹೊಸ ದಿಗಂತ

# ತಂಬಾಕು ಜಾಗೃತಿ



**ಬೆಂಗಳೂರು:** ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾರ್ಯಕ್ರಮ ಪಡಿಯಲ್ಲಿ ತಂಬಾಕು ದುಷ್ಪರಿಣಾಮ ಹಾಗೂ ಕೋಟ್ಪಾ 2003 ಕುರಿತು ಬುಧವಾರ ನಗರದಲ್ಲಿ ಬೀದಿ ನಾಟಕಗಳ ಮೂಲಕ ಜಾಗೃತಿ ಮೂಡಿಸಿದರು. ನಗರದ ಪ್ರಮುಖ ಸ್ಥಳಗಳಾದ ಮೈಸೂರು ಬ್ಯಾಂಕ್ ವೃತ್ತ, ಪುರಭವನ, ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣ ಮತ್ತು ಕೆ.ಆರ್. ಮಾರುಕಟ್ಟೆಯಲ್ಲಿ ಬೀದಿ ನಾಟಕ ಪ್ರದರ್ಶನ ಮಾಡಿ, ಜನರ ಗಮನ ಸೆಳೆದರು. ಇನ್ನು ಈ ನಾಟಕದಲ್ಲಿ ತಂಬಾಕು, ಗುಟ್ಕಾ ದುರಭ್ಯಾಸ ಬೆಳೆಸಿಕೊಳ್ಳಬಾರದು. ಇನ್ನು ಅವುಗಳನ್ನು ಸೇವಿಸುವುದರಿಂದ ಆರೋಗ್ಯಕ್ಕೆ ಅಪಾಯಕಾರಿ ಎಂಬ ಸಂದೇಶವನ್ನು ವಿಭಿನ್ನವಾಗಿ ಸಾರುವ ಮೂಲಕ ಜಾಗೃತಿ ಮೂಡಿಸಿದರು. ಇನ್ನು ಜಾಗೃತಿ ಮೂಡಿಸಲು ವಿಶ್ವಭಾರತಿ ಕಲಾ ತಂಡ, ಶೂನ್ಯ, ಅದ್ವಯ, ಮಹಾನಾಯಕ ತಂಡಗಳು ಬಿಬಿಎಂಪಿ ಸಹಯೋಗದೊಂದಿಗೆ ರಾಷ್ಟ್ರೀಯ ತಂಬಾಕು ನಿಯಂತ್ರಣ ಜಾಗೃತಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದರು.

Edit with WPS Office

ಸಂಯುಕ್ತ ಕರ್ನಾಟಕ

## ನೇಮಕಾತಿ ನ್ಯೂನತೆ ಸರಿಪಡಿಸದಿದ್ದರೆ ಡಿ.29ಕ್ಕೆ ಮುಷ್ಕರದ ಬೆದರಿಕೆ

# ಪಾಲಿಕೆಯಲ್ಲೂ ಮುಷ್ಕರಕ್ಕೆ ಚಿಂತನೆ

**ಸಂ.ಕ.ಸಮಾಚಾರ, ಬೆಂಗಳೂರು**

ಬಿಬಿಎಂಪಿಯಲ್ಲಿ ಪ್ರಸ್ತುತ ವೃಂದ ಮತ್ತು ನೇಮಕಾತಿ ನಿಯಮಾವಳಿ ತಿದ್ದುಪಡಿ ಸೇರಿ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಡಿ.29 ರಂದು ಬಿಬಿಎಂಪಿ ನೌಕರರ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು ಮುಷ್ಕರ ನಡೆಸಲು ತೀರ್ಮಾನಿಸಿದ್ದಾರೆ.

ಪಾಲಿಕೆಯಲ್ಲಿ ವೃಂದ ಮತ್ತು ನೇಮಕಾತಿ ನಿಯಮಾವಳಿಯಲ್ಲಿನ ನ್ಯೂನ್ಯತೆ ಸರಿಪಡಿಸಲು ಅನೇಕ ಬಾರಿ ಮನವಿ ಮಾಡಿದರೂ ಕ್ರಮ ಜರುಗಿಸಿಲ್ಲ. ಕೂಡಲೇ ಜಾರಿಗೆ ತಿದ್ದುಪಡಿ ಮಾಡಲು ಮನವಿ ಮಾಡುತ್ತಿದ್ದು, ಈ ಬಗ್ಗೆ ಕ್ರಮವಹಿಸದಿದ್ದಲ್ಲಿ ಡಿ.29 ರಿಂದ ಮುಷ್ಕರ ನಡೆಸಲಾಗುವುದು ಎಂದು ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಸಂಘದ ಅಧ್ಯಕ್ಷ ಎ. ಅಮೃತ್‌ರಾಜ್ ನಗರಾಭಿವೃದ್ಧಿ ಇಲಾಖೆಗೆ ಪತ್ರ ಬರೆದಿದ್ದಾರೆ.

**ನಗರಾಭಿವೃದ್ಧಿ ಇಲಾಖೆಗೆ ಸಂಘದ ಪತ್ರ**

ಪಾಲಿಕೆ ವೃಂದ ಮತ್ತು ನೇಮಕಾತಿ ನಿಯಮದಲ್ಲಿ 'ಎ' ಶ್ರೇಣಿ ಅಧಿಕಾರಿಗಳನ್ನು ಸರ್ಕಾರ ನೇಮಕಾತಿ ಮಾಡುತ್ತಿದ್ದು, ಇದನ್ನು ಪಾಲಿಕೆ ಆಯುಕ್ತರಿಗೆ ನೀಡಬೇಕು. ಇದರಿಂದ ಅರ್ಹ ಅಧಿಕಾರಿಗಳಿಗೆ ಸೇವಾ ಮುಂಬಡ್ತಿ, ವರ್ಗಾವಣೆ, ಗಳಿಕೆ ರಜೆ ನಗದೀಕರಣ, ನಿವೃತ್ತಿ ಅನುಮತಿ, ವಾರ್ಷಿಕ ವೇತನ ಬಡ್ತಿ ಸೌಲಭ್ಯ ದೊರೆಯುತ್ತದೆ. ನಗರ ಯೋಜನೆ ವಿಭಾಗದಲ್ಲಿ ಶೇ.100 ಎರವಲು ನೌಕರರಿದ್ದು, ಇದನ್ನು ತಪ್ಪಿಸಿ ಪಾಲಿಕೆಯ ಸಿಬ್ಬಂದಿಗೆ ಮುಂಬಡ್ತಿ ಕಲ್ಪಿಸಬೇಕು. ಕಂದಾಯ ಪರಿವೀಕ್ಷಕ ಹುದ್ದೆಗಳಿಗೆ ಶೇ.25 ನೇರ ನೇಮಕಾತಿ ನಿಯಮ ತೆಗೆದುಹಾಕಬೇಕು.

3 ವರ್ಷಕ್ಕಿಂತ ಅಧಿಕವಾಗಿ ಎರವಲು ಸೇವೆ ಮಾಡುತ್ತಿರುವ ಅಧಿಕಾರಿಗಳನ್ನು ಮಾತೃ ಇಲಾಖೆಗೆ ಹಿಂದಿರುಗಿಸಬೇಕು.

ಲೆಕ್ಕಿಗರಿಂದ ವ್ಯವಸ್ಥಾಪಕರು, ವರದಿಗಾರರಿಂದ ಸಹಾಯಕ ಕಂದಾಯ ಅಧಿಕಾರಿ ಮುಂಬಡ್ತಿಗಿರುವ ಷರತ್ತುಗಳನ್ನು ಸಡಿಲಗೊಳಿಸಬೇಕು. ವೃಂದ ಮತ್ತು ನೇಮಕಾತಿ ನಿಯಮಾವಳಿ ವೇಳೆ ಕೈಬಿಟ್ಟಿರುವ 116 ಎಸ್‌ಡಿಎ ಹುದ್ದೆ ಸೃಜಿಸಬೇಕು. ಖಾಲಿ ಇರುವ 702 ವಿವಿಧ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಬೇಕು. ಹೊಸದಾಗಿ 3,500ಕ್ಕೂ ಅಧಿಕ ಹುದ್ದೆಗಳಿಗೆ ನಗರಾಭಿವೃದ್ಧಿ ಮತ್ತು ಹಣಕಾಸು ಇಲಾಖೆ ಅನುಮತಿ ನೀಡಬೇಕು. 2007 ರಿಂದ ಸಮಾನ ಕೆಲಸಕ್ಕೆ ಸಮಾನ ವೇತನದಡಿ ಕೆಲಸ ಮಾಡುವ ನೌಕರರನ್ನು ಖಾಯಂ ಮಾಡಬೇಕು. ವಿದ್ಯಾರ್ಹತೆ ಹುದ್ದೆಯನ್ನು ಉಪ ನಿರ್ದೇಶಕರ ಹುದ್ದೆಯ ಮೇಲ್ದರ್ಜೆಗೆ ಹೆಚ್ಚಿಸಿ, ಪಾಲಿಕೆಯ ಪ್ರಾಂಶುಪಾಲರಿಗೆ ಸೇವಾ ಹಿರಿತನ ಆಧಾರದಲ್ಲಿ ಉಪ ನಿರ್ದೇಶಕರ ಹುದ್ದೆ ನೀಡಬೇಕು ಎಂದು ಆಗ್ರಹಿಸಿದ್ದಾರೆ.

### ಕೋವಿಡ್ ಮೃತರ ಕುಟುಂಬಕ್ಕೆ 30 ಲಕ್ಷ ರೂ. ಕೊಡಿ

ಕೋವಿಡ್‌ನಿಂದ ಮೃತಪಟ್ಟ ಪಾಲಿಕೆ ನೌಕರರ ಅವಲಂಬಿತರಿಗೆ 30 ಲಕ್ಷ ರೂ. ಜೀವ ವಿಮೆ ನೀಡಬೇಕು. ಜತೆಗೆ, ನಿವೃತ್ತಿ ವೇತನ, ಉಪಧನ ಹಾಗೂ ಅನುಕಂಪದ ಆಧಾರದ ಕುಟುಂಬದ ಒಬ್ಬ ಸದಸ್ಯರಿಗೆ ನೌಕರಿ ಕೊಡಬೇಕು. ಪಾಲಿಕೆ ಸಿಬ್ಬಂದಿಗೆ ನೀಡಿರುವ ಹೆಲ್ತ್ ಕಾರ್ಡ್ ಸೌಲಭ್ಯವನ್ನು, ರಾಜ್ಯ ಸರ್ಕಾರಿ ನೌಕರರಿಗೆ ನೀಡಿರುವ ಮಾದರಿಯಲ್ಲಿ ವಿಮಾ ಪದ್ಧತಿ ಜಾರಿಗೊಳಿಸಬೇಕು ಎಂದು ಒತ್ತಾಯಿಸಿದ್ದಾರೆ.



Edit with WPS Office

ಸಂಯುಕ್ತ ಕರ್ನಾಟಕ

# ಲಸಿಕೆಗೆ 1.49 ಲಕ್ಷ ಜನರ ಪಟ್ಟಿ ಸಿದ್ಧ

ಸಂ.ಕ. ಸಮಾಚಾರ ಬೆಂಗಳೂರು

ಕೊರೊನಾಗೆ ಲಸಿಕೆ ಸಿದ್ಧವಾಗಿರುವುದರಿಂದ ಕೊರೊನಾ ವಾರಿಯರ್‌ಗಳಿಗೆ ಪ್ರಥಮ ಆದ್ಯತೆಯಾಗಿ ನೀಡಲಾಗುತ್ತಿದ್ದು, ಇದಕ್ಕಾಗಿ 1.49 ಲಕ್ಷ ಜನರ ಪಟ್ಟಿ ಸಿದ್ಧ ಮಾಡಲಾಗಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಯಾರ್‍ಯಾರಿಗೆ ಕೊರೊನಾ ಲಸಿಕೆ ನೀಡಬೇಕು ಎಂಬ ಬಗ್ಗೆ ಪಟ್ಟಿಯನ್ನು ಸಿದ್ಧ ಮಾಡಲಾಗಿದೆ. ಇದಕ್ಕಾಗಿ ಈಗಾಗಲೇ ಬೆಂಗಳೂರು ನಗರದಲ್ಲಿ 22 ಲಕ್ಷ ಡೋಸ್ ಲಸಿಕೆ ಶೇಖರಣೆಗೆ 108 ಐಸ್‌ಲೈನ್ಡ್, 170 ಫ್ರೀಜರ್ ಸೇರಿ ಎಲ್ಲ ವ್ಯವಸ್ಥೆ ಮಾಡಿಕೊಳ್ಳಲಾಗಿದೆಯಲ್ಲದೆ, ಕೊರೊನಾ ವಾರಿಯರ್‌ಗಳಿಗೆ ಲಸಿಕೆ ನೀಡಲು ಸಂಬಂಧಪಟ್ಟ ಆರೋಗ್ಯ ಸಿಬ್ಬಂದಿಗೆ ತರಬೇತಿ ನೀಡಲಾಗುತ್ತಿದೆ. ಲಸಿಕೆ ನೀಡಲು ವೈದ್ಯರು, ನರ್ಸ್, ಪ್ಯಾರಾ ಮೆಡಿಕಲ್, ನರ್ಸ್‌ಗಳಿಗೆ ನೀಡುವ ಎಲ್ಲ ತಂಡಗಳ ಪಟ್ಟಿ ಸಿದ್ಧ ಮಾಡಲಾಗಿದೆ. ಇವರು ಮಾತ್ರವಲ್ಲದೆ, ಆರೋಗ್ಯ ಕಾರ್ಯಕರ್ತರು, ಪೊಲೀಸ್ ಸಿಬ್ಬಂದಿ ಸೇರಿದಂತೆ ಲಾಕ್‌ಡೌನ್ ಸಂದರ್ಭದಲ್ಲಿ ಕಾರ್ಯನಿರ್ವಹಿಸಿರುವ ಹಾಗೂ ಹಾಲಿ ನಿರ್ವಹಿಸುತ್ತಿರುವವರ ಪಟ್ಟಿ ಸಿದ್ಧ ಮಾಡಿಕೊಳ್ಳಲಾಗುತ್ತಿದೆ. ಆರೋಗ್ಯ ವಿಭಾಗದ ಸಿಬ್ಬಂದಿಗಳ ಸಂಖ್ಯೆ – 15072, ಮೇಲ್ವಿಚಾರಕರು, ಸಹಾಯಕರು – 2884, ಖಾಸಗಿ ಹೆಲ್ತ್ ವಿಭಾಗದಲ್ಲಿ – 12400, ಖಾಸಗಿ ಪ್ಯಾರಾ ಮತ್ತು ನರ್ಸಿಂಗ್ – 64655 ಸೇರಿದಂತೆ ಒಟ್ಟಾರೆ ಆರೋಗ್ಯ ಇಲಾಖೆ ಪಟ್ಟಿ ಸಿದ್ಧಪಡಿಸಿರುವ ಪಟ್ಟಿ ಪ್ರಕಾರ 1.49 ಲಕ್ಷ ಮಂದಿ ವ್ಯಾಕ್ಸಿನ್ ಪಡೆಯಲಿದ್ದಾರೆ.



Edit with WPS Office

ಜನದನಿಯ ಸಾರಥಿ
ವಾರ್ತಾ ಭಾರತಿ

ವಾರ್ತಾ ಭಾರತಿ

## ಕಸ ಸಂಗ್ರಹಣೆಗೆ ಶುಲ್ಕ ವಿರೋಧಿಸಿ ಕಾಂಗ್ರೆಸ್ ಪ್ರತಿಭಟನೆ

# ಬಿಜೆಪಿ ಆಡಳಿತದಲ್ಲಿ ಜನಸಾಮಾನ್ಯರ ಮೇಲೆ ತೆರಿಗೆ ಹೆಚ್ಚಳ



**ರಾಮಲಿಂಗಾರೆಡ್ಡಿ**

ಬೆಂಗಳೂರು, ಡಿ.16: ಬೆಂಗಳೂರಿನಲ್ಲಿ ಕಸ ಸಂಗ್ರಹಣೆಗೆ ಪ್ರತಿ ಮನೆಗೆ ಮಾಸಿಕ ಶುಲ್ಕ ವಿಧಿಸಲು ಮುಂದಾಗಿರುವ ಬಿಜೆಪಿ ಸರಕಾರದ ಕ್ರಮ ಜನವಿರೋಧಿಯಾಗಿದೆ. ಕೂಡಲೇ ಈ ನಿರ್ಧಾರವನ್ನು ಕೈಬಿಡಬೇಕೆಂದು ಹಿರಿಯ ಶಾಸಕ ರಾಮಲಿಂಗಾರೆಡ್ಡಿ ಒತ್ತಾಯಿಸಿದ್ದಾರೆ.

ಬುಧವಾರ ಬಿಬಿಎಂಪಿ ಕಸ ಸಂಗ್ರಹಣೆಗೆ ಮಾಸಿಕ ಶುಲ್ಕ ವಿಧಿಸುತ್ತಿರುವುದನ್ನು ಖಂಡಿಸಿ ಕೆಪಿಸಿಸಿ ವತಿಯಿಂದ ಆಯೋಜಿಸಿದ್ದ ಪ್ರತಿಭಟನೆಯಲ್ಲಿ ಭಾಗವಹಿಸಿ ಮಾತನಾಡಿದರು.

ಈಗಾಗಲೇ ಕಸದ ನಿರ್ವಹಣೆಗಾಗಿ ಮೀಸಲಿಟ್ಟಿರುವ ಹಣದಿಂದಲೇ ಕಸ ವಿಲೇವಾರಿ ಸಂಬಂಧಿ ವಿವಿಧ ರೀತಿಯಲ್ಲಿ ನಿರ್ವಹಿಸಲಾಗುತ್ತಿದೆ. ಆದರೂ ರಾಜ್ಯ ಸರಕಾರ ಕಸದ ನಿರ್ವಹಣೆಗಾಗಿ ಪ್ರತಿ ಮನೆಗೆ ಮಾಸಿಕ ಶುಲ್ಕವನ್ನು ವಿಧಿಸಲು ಮುಂದಾಗಿದೆ. ಬಿಜೆಪಿ ಸರಕಾರ ಕೋವಿಡ್ ಸಮಸ್ಯೆಯ ನಡುವೆ ಜನತೆಯನ್ನು ಮತ್ತಷ್ಟು ಸಮಸ್ಯೆಗೆ ಈಡು ಮಾಡುವುದು ಸರಿಯಲ್ಲವೆಂದು ತಿಳಿಸಿದ್ದಾರೆ.

ಬಿಜೆಪಿ ಆಡಳಿತಾವಧಿಯಲ್ಲಿ ಜನಸಾಮಾನ್ಯರ ಮೇಲೆ ತೆರಿಗೆ ವಿಪರೀತವಾಗಿ ಹೆಚ್ಚಾಗಿದೆ ಎಂದು ಆರೋಪಿಸಿದರು.

ಪ್ರತಿಭಟನೆಯಲ್ಲಿ ಕಾಂಗ್ರೆಸ್ ಹಿರಿಯ ನಾಯಕ ಹರಿಪ್ರಸಾದ್, ಶಾಸಕ ಸೌಮ್ಯಾರೆಡ್ಡಿ, ಕಾರ್ಯಕರ್ತರು ಭಾಗವಹಿಸಿದ್ದರು.

Bengaluru Edition
Dec 17, 2020 Page No.3

Edit with WPS Office

ಸಂಜೆವಾಣಿ
1982

# ಬಿಬಿಎಂಪಿ ಮಾರ್ಷಲ್‌ಗೆ ಭತ್ಯೆ ಈಡೇರದ ಭರವಸೆ

ಬೆಂಗಳೂರು, ಡಿ.10 – ಬಿಬಿಎಂಪಿ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿಯಮ ಉಲ್ಲಂಘಿಸಿದವರಿಗೆ ದಂಡ ವಿಧಿಸಿ ವಸೂಲಿ ಮಾಡಿದ ಮಾರ್ಷಲ್‌ಗಳಿಗೆ ಶೇ.5 ರಷ್ಟು ಭತ್ಯೆ ನೀಡುವುದಾಗಿ ಹೇಳಿದ ಬಿಬಿಎಂಪಿ ಈವರೆಗೆ ಒಂದೇ ಒಂದು ಬಾರಿಯೂ ಭತ್ಯೆ ನೀಡಿಲ್ಲ ಎನ್ನುವ ಆರೋಪ ಕೇಳಿಬಂದಿದೆ.

ಬಿಬಿಎಂಪಿ ಘನತ್ಯಾಜ್ಯ ನಿರ್ವಹಣೆಗೆ ಮಾರ್ಷಲ್ ನೇಮಿಸುವಾಗ ಸಂಗ್ರ?ಹ ಮಾಡುವ ದಂಡ ಮೊತ್ತದಲ್ಲಿ ಶೇ.5ರಷ್ಟು ಭತ್ಯೆ ನೀಡುವುದಾಗಿ ಪಾಲಿಕೆ ಭರವಸೆ ನೀಡಿತ್ತು. ಆದರೆ, ಮಾರ್ಷಲ್‌ಗಳನ್ನು ನೇಮಕ ಮಾಡಿಕೊಂಡ ನಂತರ ಈವರೆಗೆ ಕನಿಷ್ಠ ಒಂದು ಬಾರಿಗೂ ಭತ್ಯೆ ಕೈಸೇರಿಲ್ಲ ಎನ್ನಲಾಗಿದೆ. ಇನ್ನು ಕೊರೊನಾ ಸೋಂಕಿನ ಸಂದರ್ಭದಲ್ಲಿ ಒಟ್ಟು 2.38 ಕೋಟಿ ದಂಡ ಸಂಗ್ರಹಿಸಿದ್ದಾರೆ. ಇದಲ್ಲದೆ, ಕೊರೊನಾ ಸೋಂಕು ನಿಯಮ ಉಲ್ಲಂಘನೆ ಮಾಡುವವರಿಂದಲೂ ದಂಡ ಸಂಗ್ರಹ ಮಾಡುತ್ತಿದ್ದಾರೆ. ಆದರೆ, ಭತ್ಯೆ ಮಾತ್ರ ನೀಡುತ್ತಿಲ್ಲ ಎಂದು ಹೆಸರು ಹೇಳಲು ಇಚ್ಛಿಸದ ಮಾರ್ಷಲ್‌ಯೊಬ್ಬರು ತಿಳಿಸಿದರು.

ಪಾಲಿಕೆ ಮಾರ್ಷಲ್‌ಗಳು ಸಂಗ್ರಹಿಸುವ ದಂಡದ ಮೊತ್ತದಲ್ಲಿ ಶೇ.5ರಷ್ಟು ಭತ್ಯೆ ನೀಡುವ ಕುರಿತ ಕಡತವನ್ನು ಬಿಬಿಎಂಪಿ ಆಯುಕ್ತರಿಗೆ ಕಳುಹಿಸಲಾಗಿದೆ. ಶೀಘ್ರದಲ್ಲಿಯೇ ಆಯುಕ್ತರು ಕ್ರಮ ಕೈಗೊಳ್ಳಲಿದ್ದಾರೆ. ಕೊನೆಯ 3 ತಿಂಗಳಿಗೆ ಅನ್ವಯ ಆಗುವಂತೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಆಯುಕ್ತರ ಒಪ್ಪಿಗೆ ಸಿಕ್ಕರೆ ಪ್ರತಿ ತಿಂಗಳು ಮಾರ್ಷಲ್‌ಗಳ ಖಾತೆಗೆ ಭತ್ಯೆ ಹಣ ಹಾಕಲಾಗುವುದು ಎಂದು ಪಾಲಿಕೆಯ ಹಿರಿಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

Edit with WPS Office

ಈ ಸಂಜೆ

# ಉದ್ದಿಮೆ ಪರವಾನಗಿ ಹೆಸರಲ್ಲಿ ಹಣ ಸುಲಿಗೆ

**ಬೆಂಗಳೂರು,ಡಿ.16-** ಉದ್ದಿಮೆ ಪರವಾನಗಿ ಹೆಸರಿನಲ್ಲಿ ಬಿಬಿಎಂಪಿಯವರು ಉದ್ದಿಮೆದಾರರಿಂದ ಕೋಟ್ಯಂತರ ರೂ. ಸುಲಿಗೆ ಮಾಡುತ್ತಿದ್ದಾರೆ ಎಂದು ಆಮ್ ಆದ್ಮಿ ಪಕ್ಷದ ಮುಖಂಡ ಆನಂದ್ ವಾಸುದೇವನ್ ಆರೋಪಿಸಿದ್ದಾರೆ.

ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ಉದ್ದಿಮೆ ಪರವಾನಗಿ ನೀಡುವ ನೆಪದಲ್ಲಿ ನಡೆಯುತ್ತಿರುವ ಸುಲಿಗೆಯನ್ನು ತಪ್ಪಿಸಲು ಆನ್‌ಲೈನ್ ಮೂಲಕ ಉದ್ದಿಮೆ ಪರವಾನಗಿ ನೀಡಲಾಗುವುದು ಎಂದು ಮಾಧ್ಯಮಗಳ ಮುಂದೆ ಹೇಳಿಕೆ ನೀಡಿದ್ದ ಆಯುಕ್ತ ಮಂಜುನಾಥ್ ಪ್ರಸಾದ್ ಅವರ ಮಾತು ಸುಳ್ಳಾಗಿದೆ. ಕೋಟ್ಯಂತರ ರೂ. ಲೂಟಿ ಮಾಡುತ್ತಿದ್ದಾರೆ ಎಂದು ದೂರಿದ್ದಾರೆ.

ಮೇಲಿನ ಅಧಿಕಾರಿಗಳು ತಮ್ಮ ಕೆಳಗಿನ ಅಧಿಕಾರಿಗಳನ್ನು ರಕ್ಷಿಸುತ್ತಿದ್ದಾರೆ. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ವ್ಯವಸ್ಥೆಯನ್ನು ಹಾಳುಗೆಡವಿ, ಉದ್ದಿಮೆದಾರರನ್ನು ಕಚೇರಿಗೆ ಕರೆಸಿ ನವೀಕರಣದ ಹೆಸರಿನಲ್ಲಿ ಹಣ ಪೀಕಲಾಗುತ್ತಿದೆ. ಎಲ್ಲಾ ಮಾಜಿ ಮೇಯರ್‌ಗಳು, ಮಾಜಿ ಸ್ಥಾಯಿ ಸಮಿತಿ ಅಧ್ಯಕ್ಷರು, ಮಾಜಿ ಪಾಲಿಕೆ ಸದಸ್ಯರು ಸಹ ಈ ಜಾಲದಲ್ಲಿ ಇದ್ದಾರೆ ಎಂದು ಆರೋಪಿಸಿದರು.

ಬೆಂಗಳೂರಿನಲ್ಲಿ ಉದ್ದಿಮೆ ತೆರೆಯುವುದು ಇನ್ನು ಸುಲಭ ಎಂದು ಹೇಳಿದ್ದ ಬಿಬಿಎಂಪಿ ಹಿಂಬಾಗಿಲ ಮೂಲಕ ಉದ್ದಿಮೆದಾರರಿಂದ ಹಣ ದೋಚುತ್ತಿದ್ದು, ಪರವಾನಗಿಗೆ ನೀಡುವುದೇ ದಂಧೆಯಾಗಿ ಮಾರ್ಪಟ್ಟಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಈ ಸಂಜೆ Wed, 16 December 2020
https://epaper.eesanje.com/c/57068350

Edit with WPS Office

ಈ ಸಂಜೆ



ಬಿಬಿಎಂಪಿ ವತಿಯಿಂದ ತಂಬಾಕು ಬಳಕೆ, ದುಷ್ಪರಿಣಾಮ ಹಾಗೂ ಕೋಟ್ಪಾ ಕಾಯ್ದೆ ಕುರಿತು ಪುರಭವನದ ಮುಂಭಾಗ ಬೀದಿ ನಾಟಕದ ಮೂಲಕ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಯಿತು.



Edit with WPS Office